**3 ನೇ ಹೆಚ್ಚುವರಿ ಹಿರಿಯ ದಿವಾಣಿ ನಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಧಾರವಾಡ.**

ಸಿಸಿ ನಂಃ **2744/2024**

ಪಿರ್ಯಾದಿಃ ಚಿದಂಬರ ಸೌಹಾರ್ದ ಪತ್ತಿನ
ಸಹಕಾರಿ ನಿಯಮಿತ ಧಾರವಾಡ
ಪ್ರತಿನಿಧಿಸುವವರು

ಶ್ರೀಮತಿ ಪರಿಮಳಾ ಆನಂದ ಜೋಶಿ

-ವಿರುದ್ಧ-

ಆರೋಪಿಃ ಕಲ್ಪನಾ ದತ್ತಾತ್ರೇಯ ಕುಲಕರ್ಣಿ

ಃಆಪಾದನೆಃ

ಆರೋಪಿತಳಾದ ನೀನು ಪಿರ್ಯಾದಿದಾರ ಸಂಸ್ಥೆಯಿಂದ ನಿನ್ನ ಹಣದ ಅವಶ್ಯಕತೆ ಸಲುವಾಗಿ ರೂ 30,000/- ಗಳನ್ನು ಸಾಲ ಪಡೆದು ಸದರಿ ಸಾಲವನ್ನು ಒಟ್ಟು 24 ಕಂತಗಳಲ್ಲಿ ಬಡ್ಡಿ ಸಮೇತ ಮರುಪಾವತಿ ಮಾಡುತ್ತೇನೆ ಎಂದು ಭರವರಸೆ ನೀಡಿ ನೀವು ಸದರಿ ಸಾಲದ ಮರುಪಾವತಿಗಾಗಿ ಫೆಡರಲ್ ಬ್ಯಾಂಕ ಲಿ ಶಾಖೆಯ ಚೆಕ್ ನಂಬರ ಃ 057252 ದಿಃ 03-08-2023 ರಂದು ರೂ.38,000/-ನೇದ್ದನ್ನು ಪಿರ್ಯಾದಿದಾರರಿಗೆ ನೀಡಿದ್ದು, ಪಿರ್ಯಾದುದಾರ ಅದನ್ನು ನಗದಿಕರಣಕ್ಕಾಗಿ ತನ್ನ ಬ್ಯಾಂಕ್ ಆದ ಕರ್ನಾಟಕ ಬ್ಯಾಂಕ ಲಿ ಗೋಪಾಲಪುರ ಶಾಖೆ ಧಾರವಾಡದಲ್ಲಿ ಹಾಜರುಪಡಿಸಿದಾಗ ಅದು “Drawer signature incomplete” ಎಂಬ ಶರಾದೊಂದಿಗೆ ಸದರಿ ಚೆಕ್ ದಿನಾಂಕ 04.08.2023 ರಂದು ಅಮಾನ್ಯಗೊಂಡಿದ್ದು ತದನಂತರ ಆರೋಪಿತಳು ಸದರಿ ಚೆಕ್ಕನ್ನು ಸೆಪ್ಟೆಂಬರ 2023 ಕೊನೆ ವಾರದಲ್ಲಿ ಹಾಜರುಪಡಿಸಲು ವಿನಂತಿಸಿದಾಗ ಪಿರ್ಯಾದಿ ಸದರಿ ಚೆಕ್ಕನ್ನು ದಿಃ26-9-2023 ಸದರಿ ಬ್ಯಾಂಕಗೆ ಹಾಜರಿಪಡಿಸಿದಾಗ ಮತ್ತೆ ಅದು “Drawer signature differs” ಎಂಬ ಶರಾದೊಂದಿಗೆ ಸದರಿ ಚೆಕ್ ದಿನಾಂಕ 27.09.2023 ರಂದು ಅಮಾನ್ಯಗೊಂಡಿದ್ದು ಇರುತ್ತದೆ. ಸದರಿ ವಿಷಯದ ಬಗ್ಗೆ ತಮಗೆ ತಿಳಿಸಿ, ದಿಃ 25.10.2023 ರಂದು ಪಿರ್ಯಾದುದಾರ ಕಾನೂನುಬದ್ಧ ನೋಟಿಸ್ ನೀಡಿದ್ದು, ಅದು ನಿಮಗೆ ಜಾರಿಯಾಗಿದ್ದರೂ ಸಹ ಸದರಿ ನೋಟಿಸನ್ನು ಸ್ವೀಕರಿಸದೇ ಮತ್ತು ಚೆಕ್ ಹಣ ಪಾವತಿಸದೇ ನೀವು ಪಿರ್ಯಾದಿದಾರರೊಂದಿಗೆ ಮೋಸ ಮಾಡುವ

ಉದ್ದೇಶದಿಂದ ಖೊಟ್ಟಿ ಚೆಕ್ಕ ವಿತರಿಸಿ ಲಿಖಿತ ವರ್ಗಾವಣೆಯ ಕಾಯ್ದೆಯ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯ ಸಂಜ್ಞೆಯೊಳಗೆ ಮಾಡಿರುತ್ತೀರಿ?

ಪ್ರಶ್ನೆಃ ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರಃ ಹೌದು.

ಪ್ರಶ್ನೆಃ ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬಯಸುತ್ತೀರಾ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು .

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ.

ದಿನಾಂಕಃ

**3** ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ**.,** ಧಾರವಾಡ**.**